


International Journal of Kannada Research
www.kannadajournal.com

**ISSN: 2454–5813**
IJKR 2021; 7(1): 27-28
© 2021 IJKR
www.kannadajournal.com
Received: 19-10-2020
Accepted: 18-12-2020

**ಶೈಲೇಶಕುಮಾರ ಕ್ಷೇಮಲಿಂಗ**
ಕನ್ನಡ ಸಂಶೋಧನಾ ವಿದ್ಯಾರ್ಥಿ
ಗುಲಬರ್ಗಾ ವಿಶ್ವವಿದ್ಯಾಲಯ,
ಕಲಬುರಗಿ

**Corresponding Author:**
**ಶೈಲೇಶಕುಮಾರ ಕ್ಷೇಮಲಿಂಗ**
ಕನ್ನಡ ಸಂಶೋಧನಾ ವಿದ್ಯಾರ್ಥಿ
ಗುಲಬರ್ಗಾ ವಿಶ್ವವಿದ್ಯಾಲಯ,
ಕಲಬುರಗಿ

# ಸಾಮಾಜಿಕತೆಯ ನಾಟಕಕ್ಕೆ ಕೈಲಾಸಂ ಅವರ ಕೊಡುಗೆ

**ಶೈಲೇಶಕುಮಾರ ಕ್ಷೇಮಲಿಂಗ**

ಇಂಗ್ಲೆಂಡಿನಲ್ಲಿ ತಮ್ಮ ತಾರುಣ್ಯದ ಪ್ರಮುಖ ಕಾಲವನ್ನು ಕಳೆದ ಕೈಲಾಸಂ ಅಲ್ಲಿನ ರಂಗಭೂಮಿ ಮತ್ತು ಆಟಕ ಸಾಹಿತ್ಯದ ಆಳವಾದ ಪರಿಚಯ ಪಡೆದಿದ್ದರು. ಸಮಾಜದ ವಿಮರ್ಶೆಯ ಸಾಧನವಾಗಿ ಪಾಶ್ಚಾತ್ಯರು ರಂಗಭೂಮಿಯನ್ನು ಬಳಸಿಕೊಂಡಿದ್ದ ಸಂಗತಿಯನ್ನು ಪ್ರತ್ಯಕ್ಷ ನೋಡಿ ಬಂದವರಾಗಿದ್ದ ಅವರು ಸಹಜವಾಗಿಯೇ ಕನ್ನಡ ರಂಗಭೂಮಿಯ ದುಃಸ್ಥಿತಿಗೆ ಮರುಗಿದರು. ಕನ್ನಡ ರಂಗಭೂಮಿಗೆ ಸಮಕಾಲೀನ ಮಹತ್ವವನ್ನು ತಂದುಕೊಡುವ ಸಾಮಾಜಿಕ ನಾಟಕಗಳ ರಚನೆ ಮತ್ತು ಪ್ರಯೋಗಗಳಲ್ಲಿ ತೊಡಗಿದರು.

ಸಾಮಾಜಿಕ ನಾಟಕ ಪರಂಪರೆಯೊಂದಕ್ಕೆ ಭದ್ರ ಬುನಾದಿ ಹಾಕಿದ ಕೀರ್ತಿ ಕೈಲಾಸಚಿರವರಿಗೆ ಸೇರುತ್ತದೆ. ರಂಗಭೂಮಿಯಲ್ಲಿ ಮಹತ್ವದ ಬದಲಾವಣೆಗೆ ಕಾರಣವಾಗಿ ಹೊಸ ಸಾಮಾಜಿಕ ನಾಟಕಗಳ ಆದ್ಯ ಪ್ರವರ್ತಕರೆಂದು ಹೆಸರಾಗಿದ್ದಾರೆ. ಸಮಕಾಲೀನ ಸಮಸ್ಯೆಗಳ ಗಂಭೀರ ಚರ್ಚೆಗೆ ಮತ್ತು ಆಳವಾದ ಪರಿಶೋಧನೆಗೆ ನಾಟಕವನ್ನು ಪರಿಣಾಮಕಾರಿ ಮಾಧ್ಯಮವನ್ನಾಗಿಸಿದ ಕೀರ್ತಿ ವಾಸ್ತವ ಮಾರ್ಗದ ಸಾಮಾಜಿಕ ನಾಟಕ ಪರಂಪರೆಗೆ ಮೊದಲಿಗ್ಗರು. ಹವ್ಯಾಸಿ ರಂಗಭೂಮಿಯ ಉದಯ, ವಿಕಾಸಗಳಿಗೂ ಕೈಲಾಸಂರವರ ಕಾರಣರಾಗಿದ್ದು, ಕನ್ನಡ ರಂಗಭೂಮಿಯ ಉದಯ ವಿಕಾಸಗಳಿಗೂ ಕೈಲಾಸಚಿರವರೇ ಕಾರಣರಾಗಿದ್ದಾರೆ.

ಕೈಲಾಸಂ ರವರ ಮೊದಲ ನಾಟಕವಾದ 'ಟೊಳ್ಳುಗಟ್ಟಿ' ಸಮಕಾಲಿನ ಸಮಾಜ ಮತ್ತು ರಂಗಭೂಮಿಗೆ ಹಿಡಿದ ಕನ್ನಡಿಯಂತಿದೆ. ಪ್ರತಿಷ್ಠಿತ ನಾಟಕಕಾರರ ಆತ್ಮ ಪ್ರಶಂಸಾ ವಿಡಂಬನೆಯ ಗುರಿಯನ್ನಿಟ್ಟುಕೊಂಡ ಕೈಲಾಸಂ ತಮ್ಮನ್ನು ಈ ನಾಟಕದಲ್ಲಿ ಪ್ರಹಸನ ಪಿತಾಮಹ ಎಂದು ಕರೆದುಕೊಂಡಿದ್ದಾರೆ.

'ಟೊಳ್ಳುಗಟ್ಟಿ' ನಾಟಕ ರಂಗಭೂಮಿಯಲ್ಲಿ ಹೊಸದೊಂದು ಪರ್ವವನ್ನು ಆರಂಭಿಸಿತು. ಪುರಾಣ, ಪುಣ್ಯ ಕಥೆಗಳ ಪ್ರವಚನಕ್ಕೆ ವೇದಿಕೆಯಾಗಿದ್ದ ರಂಗಭೂಮಿ ಸಾಮಾಜಿಕ ವಿಮರ್ಶೆಯ ಸಾಧನವಾಯಿತು. ಆದುದ್ದರಿಂದ ಇಬ್ಸೆನ್‌ನ 'ಡಾಲ್ಸ ಹೌಸ್'ಗೆ ಪಾಶ್ಚಾತ್ಯ ರಂಗಭೂಮಿಯ ಇತಿಹಾಸದಲ್ಲಿ ಸಿಕ್ಕ ಮಹತ್ವವೇ ಕನ್ನಡದಲ್ಲಿ 'ಟೊಳ್ಳುಗಟ್ಟಿ'ಗೆ ಸಿಗಬೇಕೆಂದು ಅ.ನ.ಕೃ ರವರು ಹೇಳುವುದು ನ್ಯಾಯವೇ ಆಗಿದೆ. ನಾಟಕಕಾರ ಗುಂಡುರಾಯ ಪೂರ್ವ ರಂಗದಲ್ಲಿ ಹೇಳುವಂತೆ 'ಟೊಳ್ಳುಗಟ್ಟಿ'ಯ ತನ್ನ ಸುತ್ತಣ ಪರಿಸರವನ್ನು ಕ್ಯಾಮ್ರಾದಂತೆ ಹಿಡಿದಿಟ್ಟಿದೆ. ಕನ್ನಡ ನಾಟಕ ಪ್ರಪಂಚದಲ್ಲಿ ಹೊಸ ಮನ್ವಂತರಕ್ಕೆ ಕಾರಣರಾದರು. ಭಾಷಾ ಶೈಲಿ ಮತ್ತು ಪಾತ್ರ ಚಿತ್ರಣದಲ್ಲಿ ಸ್ವಲ್ಪವೂ ಅತಿಶಯೋಕ್ತಿಯಿಲ್ಲವೆಂದು ಹೇಳುವುದು ತಪ್ಪಾಗುತ್ತದೆಯಾದರೂ ಈ ಉತ್ಸಾಹ ಮತ್ತು ಅತಿರಂಜನೆಗಳನ್ನು ಈ ನಾಟಕವು ಮೊದಲ ಪ್ರದರ್ಶನಗೊಂಡ ಕಾಲದ ಹಿನ್ನಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಕೈಲಾಸಚಿರವರ 'ಪೋಲಿಕಿಟ್ಟಿ' ಯಲ್ಲಿ ಪ್ರತಿಪಾದಿಸಿರುವ ವರ್ಗಭೇದವು ಸರಳವಾದದ್ದು, ಕೈಲಾಸಂ ರವರ ನಾಟಕಗಳಲ್ಲಿ ನಾವು ಕಾಣುವ ಬಡತನ ಮಧ್ಯಮ ವರ್ಗದ ಬಡತನವೇ ಹೊರತು ನಿಜವಾದ ಉಗ್ರದಾರಿದ್ರ್ಯವಲ್ಲ. ಶ್ರೀಮಂತ ವರ್ಗವನ್ನೇ ತಾತ್ಸರದಂತೆ ಹೀಗಳೆಯುತ್ತಿದ್ದ ಕಿಟ್ಟಿಯ ಸಹಾಸಕ್ಕೆ ಮಹಾರಾಜರಿಂದ ಬಹುಮಾನ ದೊರೆಯುವುದು. ಅಲ್ಲಿನ ವಿಪರ್ಯಾಸವಾತದೆಯಾದರೂ ಕಿಟ್ಟಿ ಈ ಬಹುಮಾನವನ್ನು ವ್ಯಂಗ್ಯದಿಂದಲೇ ಪಡೆದನೆಂಬ ಕಲ್ಪನೆ ಉಚಿತವಾಗಿದೆ. ಪಾತ್ರ ಸೃಷ್ಠಿಯ ದೃಷ್ಠಿಯಿಂದ ಕೈಲಾಸಂ ನಾಟಕದಲ್ಲಿ ಇದೊಂದು ಅದ್ಭುತ ಕೃತಿಯಾಗಿದ್ದು, ಕನ್ನಡ ಹವ್ಯಾಸಿ ರಂಗಭೂಮಿಯಲ್ಲಿ ಅತ್ಯಂತ ಜನಪ್ರಿಯಗೊಂಡಿತು.

'ಟೊಳ್ಳುಗಟ್ಟಿ'ಯ ದ್ವಿತೀಯ ಭಾಗದ 'ತಾಳಿ ಕಟ್ಟೋಕ್ಕೂಲೀನ' ಕೈಲಾಸಂ ರವರ ನಾಟಕಗಳಲ್ಲಿ ವಿಶಿಷ್ಟ ಮಾದರಿಗೆ ಸೇರುತ್ತದೆ. ವಿಡಂಬನೆ, ಹಾಸ್ಯ ಸಂಭಾಷಣಾ ಚಾತುರ್ಯ, ಅನ್ಯಾಯವನ್ನು ಪ್ರತಿಭಟಿಸುವಲ್ಲಿ ಕಂಡುಬರುವ ಉಗ್ರ ರೋಷ ನೋವಿಗೆ ಒಳಗಾದವರನ್ನು ಕುರಿತು ಮಾನವೀಚುತೆ ಈ ಎಲ್ಲಾ

ಅಂಶಗಳನ್ನು ಒಳಗೊಂಡಿರುವ ಈ ನಾಟಕ ಕೈಲಾಸಂರವರ ಉತ್ತಮ ಕೃತಿಯಲ್ಲಿ ಹೆಸರಾಗಿದೆ. ಎರಡು ಭಿನ್ನ ಶೈಲಿಯ ಕುಟುಂಬಗಳ ಹೋಲಿಕೆಯ ಮೂಲಕ ಟೊಳ್ಳು ಮತ್ತು ಗಟ್ಟಿಯ ವಿಚಾರವನ್ನು ಇಲ್ಲಿಯೇ ಪ್ರತಿಪಾದಿಸಲಾಗಿದೆ. ಮಕ್ಕಳಿಗೆ ನಿಜವಾದ ಗುರು ತಾಯಿ. ಮನೆಯೇ ಮೊದಲ ಪಾಠ ಶಾಲೆ ಎನ್ನುವ ಕೈಲಾಸಂ ರಾಮಣ್ಣ–ರಂಗಣ್ಣ ಇವರಿಬ್ಬರ ಮನೆಗಳ ಚಿತ್ರಣವನ್ನು, ಅವರ ಮಕ್ಕಳ ಗುಣಶೀಲಗಳನ್ನು ವಿದೃಶ ತಂತ್ರದಲ್ಲಿ ಮೂಡಿಸಿದ್ದಾರೆ. 'ಟೊಳ್ಳುಗಟ್ಟಿ'ಯಲ್ಲಿ ಮಹಾಕ್ರೂರಿಯು ಜಗಳಗಂಟಿಯೂ ಆದ ವಿಧವೆಚೂಗಿ ಕಂಡುಬರುವ ನಾಗತ್ತೆಯ ಪಾತ್ರ ಇಲ್ಲಿ ಪೂರ್ಣವಾಗಿ ಅರಳುತ್ತದೆ. ಹಿಂದೂ ಸಾಮಾಜಿಕ ಘೋರ ಕಳಂಕದಂತಿರುವ ವಿಧವೆಯರ ನೋವು, ಆಕ್ರೋಶಗಳ ಪ್ರತಿನಿಧಿಯಂತೆ ನಾಗತ್ತೆ ಗೋಚರಿಸುತ್ತಾಳೆ. ನಾಗತ್ತೆಯಂತಹ ಬ್ರಾಹ್ಮಣ ವಿಧವೆಯರ ಕಾಠಿಣ್ಯದ ಹಿಂದಿರುವ ಸಂಕಟವನ್ನು ಗುರುತಿಸಿದ ಕೈಲಾಸಂ ತಮ್ಮ ಒಂದು ಪಾತ್ರದ ಮೂಲಕ ಹೀಗೆ ಹೇಳಿರುತ್ತಾರೆ;

'ತಾಳಿಕಟ್ಟೋಕ್ಕೂಲೀನ' ಎಂಬ ಕೈಲಾಸಂ ಅವರ ನಾಟಕದ ಮುಖ್ಯ ಸಮಸ್ಯೆ ಹೆಣ್ಣು ಹೆತ್ತವರ ಸಂಕಟ. ಹೆಣ್ಣು ಮಕ್ಕಳು ಮದುವೆಯ ಸಲುವಾಗಿ ತಂದೆ ತಾಯಿಗಳು ಪಡುವ ಯಾತನೆಯನ್ನು ಕೈಲಾಸಂ ತಮ್ಮ ಹಲವು ನಾಟಕಗಳಲ್ಲಿ ಚಿತ್ರಿಸಿದ್ದರೂ ಇಂತಹ ಆಕ್ರೋಶ ಅಲ್ಲೆಲ್ಲಿಯೂ ವ್ಯಕ್ತವಾಗಿಲ್ಲ. ಮೂರು ಭಾಗಗಳಲ್ಲಿ ಚಿತ್ರಿಸಿದ್ದರೂ ಇಂತಹ ಆಕ್ರೋಶ ಅಲ್ಲೆಲಿಯೂ ವ್ಯಕ್ತವಾಗಿಲ್ಲ. ಮೂರು ಭಾಗಗಳಲ್ಲಿರುವ ಈ ನಾಟಕದ ಮೊದಲೆರಡು ಭಾಗಗಳಲ್ಲಿ ನರಸಿಂಹಯ್ಯನ ಮಗಳ ಮದುವೆಯ ಪ್ರಯತ್ನದ ಕಥೆಯನ್ನು ಕ್ರಮಬದ್ಧವಾಗಿ ಬೆಳಸಿ ಕೊನೆಯ ಭಾಗದಲ್ಲಿ 'ಯೋಧೃವಾಣಿ'ಯಲ್ಲಿ ಮುಕ್ತಾಯಗೊಳಿಸಲಾಗಿದೆ. ಈ ಮುಕ್ತಾಯ ಹೆಸರಿಗೆ ತಕ್ಕಂತೆ ವೀರೋಚಿತವಾಗಿದೆ. ನರಸಿಂಹಯ್ಯನ ಮಗಳನ್ನು ಆರುಸಾವಿರ ರೂಪಾಯಿಗಳ ವರದಕ್ಷಣೆ ಸಮೇತ ತಮ್ಮ ಮಗನಿಗೆ ತಂದುಕೊಳ್ಳಲು ಒಪ್ಪಿದ ಮಾಮತಿದಾರ ರಾಮಣ್ಣ ದಂಪತಿಗಳು ಮದುವೆಯ ಮುಹೂರ್ತದಲ್ಲಿ ಮತ್ತೆ ಹನ್ನೊಂದು ಸಾವಿರ ಕೇಳುತ್ತಾರೆ. ತನ್ನ ಮನೆಯನ್ನು ಭೋಗ್ಯಕ್ಕೆ ಬರೆದಾದರೂ ಕೂಡಲೇ ಈ ಹಣವನ್ನು ಹೊಂದಿಸಬೇಕೆಂಬ ರಾಮಣ್ಣನ ಕ್ರೌರ್ಯ ನರಸಿಂಹಯ್ಯನನ್ನು ಹುಚ್ಚನನ್ನಾಗಿಸುತ್ತದೆ. ಕೋಪಾತಿರೇಕದಿಂದ ರಾಮಣ್ಣನಿಗೆ ಚಪ್ಪಲಿಯಿಂದ ಒದ್ದು ಓಡಿಸಿ ಅದೇ ದಿನ ಮತ್ತೊಬ್ಬ ಸದ್ಗುಣವಚಿತರಾದ ಬಡ ಕುಟುಂಬಕ್ಕೆ ತನ್ನ ಮಗಳನ್ನು ನರಸಿಂಹ್ಯ ದಂಪತಿಗಳು ಧಾರೆಯೆರೆದು ಕೊಡುತ್ತಾರೆ. ಸರಳವಾದ ಕಥೆಯೊಂದರ ಮೂಲಕವೇ ತಮ್ಮ ವಿಚಾರಗಳನ್ನು ಮಂಡಿಸಿರುವ ಕೈಲಾಸಂ ಇಲ್ಲಿ ಬಂಡುಕೋರರಂತೆ ಕಂಡುಬರುತ್ತಾರೆ. ಸಾಮಾಜಿಕ ಅನ್ಯಾಯಗಳನ್ನು ಪ್ರತಿಭಟಿಸದೆ ಗೋಳಾಡುತ್ತ ಸಹಿಸುವ ಕೈಲಾಸಂ ನಾಟಕಗಳ ಉಳಿದ ನಾಯಕರಂತಿರದೆ ಇಲ್ಲಿನ ನರಸಿಂಹಯ್ಯ ಅನ್ವರ್ಥ ನಾಮ್ಮಧಾರಿಯಾಗಿ ರಾಮಣ್ಣನ್ನು ಶಿಕ್ಷಿಸುತ್ತಾನೆ. ಈ ಬಗೆಯ ಉಗ್ರ ಪ್ರತಿಭಟನೆಯನ್ನು ಕೈಲಾಸಂ ಪ್ರತಿಪಾದಿಸಿರುವುದು ಇದೊಂದೇ ನಾಟಕದಲ್ಲಿ ಎಂಬ ಕಾರಣಕ್ಕಾಗಿ ಈ ನಾಟಕ ಮಹತ್ವ ಪಡೆಯುತ್ತದೆ. ಕೈಲಾಸಂ ನಾಟಕಗಳ ಸಮನ್ವಯ ಸ್ವರೂಪ ಸಮಕಾಲೀನವಾಗಿದ್ದು, ಪರಿಹರಿಸಲು ಸಾಧ್ಯವಾಗುವಂತಹ ಸಾಮಾಜಿಕ ಕಾರಣಗಳು ಅಲ್ಲವೆಚೂದುದರಿಂದ ಅಪರಿಹಾರ್ಚುವಾದ ಗ್ರೀಕ್ ಮಾದರಿಯ ದುರಂತ ಚಿತ್ರವೊಂದನ್ನು ಇವುಗಳಿಂದ ಕಟ್ಟಿಕೊಡುವುದು ಅಸಂಭವವೆಚಿದೇ ತೋರುತ್ತದೆ. 'ಬಹಿಷ್ಕಾರ', 'ಸೂಳೆ' ಯಂತಹ ನಾಟಕಗಳು ಸಾಮಾಜಿಕ ನಿಷ್ಠುರತೆಯ ಘೋರ ಚಿತ್ರವನ್ನು ಕ್ಷರುಣಾಮಯವಾಗಿ ಚಿತ್ರಿಸದರೂ ದುರಂತ ನಾಟಕದ ಉಜ್ವಲತೆ ಅಲ್ಲಿ ಗೋಚರಿಸುವುದಿಲ್ಲ. ಬ್ರಾಹ್ಮಣ ವ್ರತಾಧೀಪತಿಯ ಕ್ರೌರ್ಯಕ್ಕೆ ತುತ್ತಾಗಿ ಸಮಾಜದಿಂದ ಹೊರಗಾದ ಕುಟುಂಬವೊಂದರ ದುರಂತ ಕಥೆಯನ್ನು 'ಬಹಿಷ್ಕಾರ' ಚಿತ್ರಿಸುತ್ತದೆ. ಹಣ ಮತ್ತು ಹುಸಿ ಸಾಮಾಜಿಕ ಪ್ರತಿಷ್ಠೆಗಳ ಮೇಲೆ ನಿಂತಿರುವ ಸಮಾಜದಲ್ಲಿ ಹುಟ್ಟಿದ ಬಡವರ ಸಂಕಷ್ಟಗಳನ್ನು ಚಿತ್ರಿಸುವುದರೊಂದಿಗೆ ಇಂತಹ ಸಮಾಜದಲ್ಲಿ ಹೆಣ್ಣಿನ ದುರ್ಗತಿಯನ್ನು ಚಿತ್ರಿಸುವುದು.

ಕೈಲಾಸಂ ಅವರ 'ಅಮ್ಮವ್ರಗಂಡ' ನಾಟಕದಲ್ಲಿ ಆಧುನಿಕ್ವತೆಯ ಫಲವಾಗಿ ಗಂಡ ಹೆಚಿಡರ ಸಂಬಂಧದಲ್ಲಾದ ಏರುಪೇರುಗಳನ್ನು ವಿಡಂಬಿಸುವ 'ಪ್ರಹಸನವೆಂದು' ಗುರುತಿಸಲ್ಪಟ್ಟಿದೆಯಾದರೂ ಅಲ್ಲಿನ ಸಮಸ್ಯೆ ಗಂಭೀರವಾದದ್ದು, 'ಸರೋಜಾ–ಸುಬ್ಬು' ಮತ್ತು 'ಕಮಲ–ನರಸಿಂಹಯ್ಯ' ಈ ಎರಡೂ ಸಂಸಾರಗಳ ಪರಸ್ಪರ ಹೋಲಿಕೆಯ ಮೂಲಕ ಆದರ್ಶ ದಾಂಪತ್ಯದ ಚಿತ್ರವೊಂದನ್ನು ರೂಪಿಸುವುದು ನಾಟಕಕಾರರ ಗುರಿಯಾಗಿರುವಂತಿದೆ. ಗಂಡನನ್ನು ಬೆದರಿಸಿ ಬಾಳುವ ಸರೋಜಾ ಹೆಚಿಡತಿಯನ್ನು ಕ್ರೂರವಾಗಿ ನಡೆಸಿಕೊಳ್ಳುವ ನರಸಿಂಹಯ್ಯನಂತಹವರನ್ನು ಕೈಲಾಸಂ ವಿಡಂಬಿಸಿದ್ದಾರೆ. ಹೆಂಡತಿಗೆ ವಿಧೇಯನಾಗಿರುವ ಸುಬ್ಬು, ಗಂಡನನ್ನು ನಮ್ರವಾಗಿ ಅನುಕರಿಸುವ ಕಮಲು ಕೈಲಾಸಂರವರ ಅನುಕಂಪಕ್ಕೆ ಪಾತ್ರರಾಗಿದ್ದಾರೆ. ಈ ಎರಡೂ ಅತೀರೇಕಗಳ ನಡುವೆ ಸುವರ್ಣ ಮಾರ್ಗವೊಂದನ್ನು ಕಂಡುಕೊಳ್ಳಬೇಕೆಂಬುದು ನಾಟಕಕಾರರ ಆಶಯವಾಗಿದೆ. ಗಂಡ ಹೆಂಡಿರ ಸಂಬಂಧದಲ್ಲಿ ಮೂಲಭೂತ ಪರಿವರ್ತನೆಗಳನ್ನು ಕಂಡುಕೊಂಡಿರುವ ಈ ನಾಟಕದಲ್ಲಿ ಸಮಸ್ಯೆಗೆ ಪರಿಹಾರ ಸರಳವಾಗಿ ಬಿಟ್ಟಿದೆ. ನರಸಿಂಹಯ್ಯ ಸರೋಜರಂತಹ ಅತೀರೇಕದ ವ್ಯಕ್ತಿಗಳನ್ನು ಮುಖಾಮುಖಿಯಾಗಿಸಿ ಚರ್ಚೆ, ವಾಗ್ವಾದಗಳನ್ನು ಏರ್ಪಡಿಸಿ ಅವರ ಸ್ವಭಾವ ವಿಶ್ಲೇಷಣೆ ನಡೆಸುವ ನಾಟಕಕಾರರು ಪಾತ್ರವನ್ನು ವೈಭವೀಕರಿಸಿದ್ದಾರೆ.

ಕೈಲಾಸಂರವರು ತಮಗೆ ಪರಿಚಿತವಿದ್ದ ಪರಿಸರವನ್ನು ಮಾತ್ರ ತಮ್ಮ ನಾಟಕಗಳಲ್ಲಿ ಚಿತ್ರಿಸಿದರೆಂಬುದೂ ದೊಡ್ಡ ಕೊರತೆಯೇನಲ್ಲ, ಅನೇಕಾನೇಕ ಜಾತಿ ಉಪಜಾತಿಗಳಿಂದ ಕೂಡಿದ ನಮ್ಮ ದೇಶದ ಸಮಗ್ರ ಜೀವನವನ್ನು ಒಳಗೊಳ್ಳುವಂತಹ ಕೃತಿಗೆ ಬದುಕಿನ ಆಳವಾದ ನೋಟ ಲಭ್ಯವಾಗದೆ ಹೋಗಬಹುದು. ಜಾತಿಬದ್ಧ ಪರಿಸರದಲ್ಲಿ ಹುಟ್ಟಿ ಬೆಳೆದು ನಾಟಕಕಾರನಿಗೆ ಸಹಜವಾಗಿಯೇ ಉಳಿದ ಜಾತಿಗಳ ಅರಿವು ಕೇವಲ ಬಾಹ್ಯನೆಲೆಗೆ ಮಾತ್ರ ಸಂಬಂಧಿಸಿರುತ್ತದೆ. ಕೈಲಾಸಂ ನಾಟಕಗಳು ಹುಟ್ಟಿದ ಕಾಲಕ್ಕೆ ಈ ಮಾತು ಹೆಚ್ಚಾಗಿ ಅನ್ವಯಿಸ್ಮತ್ತದೆಯಾದರೂ ಇಂದಿಗೂ ಕೆಲವು ಮೂಲಭೂತ ವಿಚಾರಗಳಲ್ಲಿ ನಮ್ಮ ದೇಶ ಬದಲಾಗಿಲ್ಲವೆಂಬುದನ್ನು ಮರೆಯುವಂತಿಲ್ಲ.